# ತೋಟಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯ, ಬಾಗಲಕೋಟೆ

ದೂರವಾಣಿ ಸಂಖ್ಯೆ: 08354-201354
ಫ್ಯಾಕ್ಸ್ ಸಂಖ್ಯೆ: 08354-235152
ಮೊ: 9480696389
Email: registrar@uhsbagalkot.edu.in

ಕುಲಸಚಿವರ ಕಾರ್ಯಾಲಯ,
ಉದ್ಯಾನಗಿರಿ,
ನವನಗರ,
ಬಾಗಲಕೋಟೆ – 587 104

ಸಂಖ್ಯೆ: ಕು/ತೋವಿವಿಬಾ/ನೇ.ವಿ./ಸೇ.ಸಿ.ಮುಂಬಡ್ತಿ–2018/2019–20/1720 ದಿನಾಂಕ: 07.01.2020

## ಅಧಿಸೂಚನೆ

ವಿಷಯ : ಸೇವಾ ಸಿಬ್ಬಂದಿಯವರ ಮುಂಬಡ್ತಿಗಾಗಿ ಅರ್ಹತಾ ಪಟ್ಟಿಯನ್ನು ಪ್ರಕಟಿಸುವ ಕುರಿತು.

ಉಲ್ಲೇಖ :
1. ದಿನಾಂಕ: 31.12.2018 ರಂದು ಇದ್ದಂತೆ ಶಿಕ್ಷಕೇತರ ನೌಕರರ ಅಂತಿಮ ಜೇಷ್ಠತಾ ಪಟ್ಟಿಯನ್ನು ಪ್ರಕಟಿಸಿರುವ ಸುತ್ತೋಲೆಗಳ ಸಮಸಂಖ್ಯೆ 692 ಮತ್ತು 785 ದಿನಾಂಕ 30.07.2019 ಮತ್ತು 09.08.2019.
2. ದಿನಾಂಕ: 08.08.2019 ರಂದು ಜರುಗಿದ 2018 ರ ಶಿಕ್ಷಕೇತರ ನೌಕರರ ಮುಂಬಡ್ತಿ ಪರಿಶೀಲನಾ ಸಮಿತಿಯ ಶಿಫಾರಸ್ಸುಗಳು
3. ವಿಶ್ವವಿದ್ಯಾಲಯದ ಮುಂಬಡ್ತಿ ಅದೇಶಗಳ ದಿನಾಂಕ 17.09.2019, 31.10.2019 ಮತ್ತು 30.12.2019.
4. ಸಿಬ್ಬಂದಿಯ ಮನವಿ ಪತ್ರ ದಿನಾಂಕ 24.09.2019.
5. ಈ ಕಛೇರಿಯ ಪತ್ರ ಸಂಖ್ಯೆ: ಕು/ತೋವಿವಿಬಾ/ನೇವಿ/1195/2019–20/1291, ದಿನಾಂಕ 18.10.2019.
6. ಸರ್ಕಾರದ ಅಧೀನ ಕಾರ್ಯದರ್ಶಿಗಳು (ಕಲ್ಯಾಣ–ಕರ್ನಾಟಕ ವಿಶೇಷ ಕೋಶ), ಸಿಆಸುಇ ಇವರ ಪತ್ರ ಸಂಖ್ಯೆ: 108 ಹೈಕ 2014, ದಿನಾಂಕ 31.10.2019.
7. ಮಾನ್ಯ ಕುಲಪತಿಗಳು, ತೋ.ವಿ.ವಿ., ಬಾಗಲಕೋಟೆ ಇವರ ಅನುಮೋದನೆ ದಿನಾಂಕ 07.01.2020.

>< >< ><

ತೋ.ವಿ.ವಿ. ಬಾಗಲಕೋಟೆಯ ವಿವಿಧ ವೃಂದಗಳಲ್ಲಿ ಕಾರ್ಯ ನಿರ್ವಹಿಸುತ್ತಿರುವ ಶಿಕ್ಷಕೇತರ ಸಿಬ್ಬಂದಿಯವರ ಅಂತಿಮ ಜೇಷ್ಠತಾ ಪಟ್ಟಿಯನ್ನು ಉಲ್ಲೇಖ (1) ರನ್ವಯ ಪ್ರಕಟಿಸಲಾಗಿರುತ್ತದೆ. ಅದರಂತೆ, ಉಲ್ಲೇಖ (2)ರ ಅನುಸಾರ 2018 ನೇ ಸಾಲಿಗೆ ಸೇವಾ ಸಿಬ್ಬಂದಿಯವರ ಮುಂಬಡ್ತಿಗೆ ಸಂಬಂಧಪಟ್ಟಂತೆ ಮುಂಬಡ್ತಿ ಪರಿಶೀಲನಾ ಸಮಿತಿಯು ದಿನಾಂಕ: 08–08–2019 ರಂದು ಸಭೆ ಸೇರಿ ವಿವಿಧ ವೃಂದಗಳಿಗೆ ಮುಂಬಡ್ತಿಗಾಗಿ ನಿಗದಿಪಡಿಸಿದ ವಿದ್ಯಾರ್ಹತೆ, ಪ್ರಸ್ತಾಪಿತ ಸಂಬಂಧಪಟ್ಟ ನೌಕರರ ಅರ್ಹತೆ, ಜೇಷ್ಠತೆ ಹಾಗೂ ಸರಕಾರದ ಆದೇಶಗಳನ್ವಯ ಮೀಸಲಾತಿ ಇತ್ಯಾದಿಗಳನ್ನು ಕೂಲಂಕುಷವಾಗಿ ಪರಿಶೀಲಿಸಿರುತ್ತದೆ. ಮುಂಬಡ್ತಿ ಪರಿಶೀಲನಾ ಸಮಿತಿಯು ಕಳೆದ ಮೂರು ವರ್ಷಗಳ ನೌಕರರ ಗೌಪ್ಯ ವರದಿಗಳನ್ನು ಪರಿಶೀಲಿಸಿರುತ್ತದೆ ಹಾಗೂ ಯಾವ ಸಿಬ್ಬಂದಿಯವರ ಅಪೂರ್ಣವಾದ ಅಥವಾ ಸ್ವೀಕೃತವಾಗದ ಗೌಪ್ಯ ವರದಿಗಳು ಪರಿಶೀಲನೆಗಾಗಿ ಒಳಪಟ್ಟಿರುತ್ತವೆ. ಈ ರೀತಿಯಾಗಿ ಪ್ರಸ್ತಾಪಿತ ನೌಕರರನ್ನು ಅವರ ಜೇಷ್ಠತೆ ಆಧಾರದ ಮೇಲೆ ಹಾಗೂ ಪ್ರಸ್ತುತ ವೃಂದದಲ್ಲಿ ಅವರುಗಳು ಕಾರ್ಯನಿರ್ವಹಿಸಿದ ವಾಸ್ತವಿಕ ದಿನಾಂಕದ ಮತ್ತು ಸ್ಥಳೀಯ / ಸ್ಥಳೀಯರಲ್ಲದವರ (ಮಿಕ್ಕುಳಿದವರ) ಹಾಗೂ ಮೀಸಲಾತಿ ಆಧಾರದ ಮೇಲೆ ಮುಂಬಡ್ತಿಗೆ ಪರಿಗಣಿಸಲು ಮುಂಬಡ್ತಿ ಪರಿಶೀಲನಾ ಸಮಿತಿಯು ಶಿಫಾರಸ್ಸು ಮಾಡಿರುತ್ತದೆ. ಅದರಂತೆ, ವಿಶ್ವವಿದ್ಯಾಲಯವು ಈಗಾಗಲೇ ಉಲ್ಲೇಖ (3)ರ ಪದೋನ್ನತಿ ಆದೇಶಗಳನ್ನು ಹೊರಡಿಸಿರುತ್ತದೆ.

ಮುಂದುವರೆದು, ಉಲ್ಲೇಖ (4)ರ ಅನುಸಾರ ಶ್ರೀ. ವಿನಯ ರೋಣದ, ಸಹಾಯಕ ಅಭಿಯಂತರರು (ಸಿವಿಲ್) ತೋವಿವಿ, ಬಾಗಲಕೋಟೆ ಇವರು ವಿಶ್ವವಿದ್ಯಾಲಯಕ್ಕೆ ಮನವಿಯನ್ನು ಸಲ್ಲಿಸಿ, ಉಲ್ಲೇಖ (1)ರ ದಿನಾಂಕ 09.08.2019ರಂದು ಹೊರಡಿಸಿದ ಅರ್ಹತಾ ಪಟ್ಟಿಯಲ್ಲಿ ತತ್ಪರಿಣಾಮದ ಬದಲಾಗಿ ಡಿಸೆಂಬರ್ 2018ನೇ ಓರ್ವ ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು ವಯೋನಿವೃತ್ತಿಯಿಂದ ಖಾಲಿಯಾಗಿರುವ ಹುದ್ದೆಗೆ ತಮ್ಮನ್ನು ಮುಂಬಡ್ತಿಗೆ ಪರಿಗಣಿಸಲು ಕೋರಿರುತ್ತಾರೆ. ಈ ಹುದ್ದೆಯನ್ನು ಪ್ರಸ್ತುತ ಕಲ್ಯಾಣ ಕರ್ನಾಟಕ ವ್ಯಾಪ್ತಿಗೆ ಮೀಸಲಿರಿಸಲಾಗಿರುವ ಹಿನ್ನೆಲೆಯಲ್ಲಿ, ಉಲ್ಲೇಖ (5)ರನ್ವಯ ಜಂಟಿ ನಿರ್ದೇಶಕರು, ಕಲ್ಯಾಣ–ಕರ್ನಾಟಕ ವಿಶೇಷ ಕೋಶ, ವಿಧಾನಸೌಧ, ಬೆಂಗಳೂರು ಇವರಿಗೆ ಪತ್ರ ಬರೆದು, ಸ್ಪಷ್ಟೀಕರಣವನ್ನು ಕೋರಲಾಗಿರುತ್ತದೆ ಮತ್ತು ಸದರಿಯವರು ಉಲ್ಲೇಖ (6)ರ ಅನುಸಾರ ಯಾವುದೇ ಸಮಯದಲ್ಲಿ ಯಾವುದೇ ಹುದ್ದೆಗಾಗಿ ಲಭ್ಯ ಸ್ಥಳೀಯ ಅಭ್ಯರ್ಥಿಗಳು ಲಭ್ಯವಾಗದಿದ್ದಲ್ಲಿ, ಅಂಥ ಖಾಲಿ ಹುದ್ದೆಗಳನ್ನು ಬ್ಯಾಕ್‌ಲಾಗ್ ಎಂದು ತೆಗೆದುಕೊಳ್ಳತಕ್ಕದ್ದು ಮತ್ತು ಮುಂದಿನ ನೇಮಕಾತಿಯ ವರೆಗೆ ಮುಂದುವರೆಸತಕ್ಕದ್ದು ಮತ್ತು ನಂತರ

ಅದನ್ನು ಮೀಸಲಾತಿಯಲ್ಲವೆಂದು ಭಾವಿಸಬಹುದು ಮತ್ತು ಅದಕ್ಕನುಸಾರವಾಗಿ ಭರ್ತಿ ಮಾಡತಕ್ಕದ್ದು ಎಂದು ಸ್ಪಷ್ಟೀಕರಣವನ್ನು ನೀಡಿರುತ್ತಾರೆ. ಆದರೆ ಸದರಿ ಹುದ್ದೆಗೆ ಕಲ್ಯಾಣ ಕರ್ನಾಟಕ ವ್ಯಾಪ್ತಿಯಲ್ಲಿ ಅರ್ಹ ಯಾವುದೇ ನೌಕರರು ಇರುವುದಿಲ್ಲವಾದ್ದರಿಂದ ಹಾಗೂ ಪ್ರಸ್ತುತ ವಿಶ್ವವಿದ್ಯಾಲಯದಲ್ಲಿ ಮುಂಬಡ್ತಿಗೆ ಸಹಾಯಕ ಅಭಿಯಂತರರ (ಸಿವಿಲ್) ಹುದ್ದೆಯಿಂದ ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು (ಸಿವಿಲ್) ಹುದ್ದೆಗೆ ಮುಂಬಡ್ತಿ ನೀಡಲು ಪ್ರಸ್ತುತ ಬ್ಯಾಕ್‌ಲಾಗ್ ರೋಸ್ಟರ್ ಇದ್ದು, ಸದರಿ ರೋಸ್ಟರ್‌ನ್ನು ಭರ್ತಿ ಮಾಡಬೇಕಾಗಿರುತ್ತದೆ. ಈ ಹಿನ್ನಲೆಯಲ್ಲಿ ಸ ಮುಂಬಡ್ತಿ ಪರಿಶೀಲನಾ ಸಮಿತಿಯು ಮುಂಬಡ್ತಿಗೆ ಶಿಫಾರಸ್ಸು ಮಾಡಿದ ನೌಕರರ **"ಅರ್ಹತಾ ಪಟ್ಟಿ"**ಯನ್ನು ಅನುಬಂಧದಲ್ಲಿ ತಿಳಿಸಿರುವಂತೆ ಈ ಮೂಲಕ ಸಂಬಂಧಪಟ್ಟ ನೌಕರರ ಗಮನಕ್ಕೆ ತರಲಾಗಿದೆ. ಸದರಿ ಅರ್ಹತಾ ಪಟ್ಟಿಯು ತೋ.ವಿ.ವಿ. ಬಾಗಲಕೋಟದ ಅಂತರ್ಜಾಲ www.uhsbagalkot.in ನಲ್ಲಿಯೂ ಲಭ್ಯವಿರುತ್ತದೆ.

ಸದರಿ ಅರ್ಹತಾ ಪಟ್ಟಿಯಿಂದಾಗಿ ಯಾವುದೇ ನೌಕರರು ಬಾಧಿತರಾಗಿದ್ದಲ್ಲಿ, ಈ ಅಧಿಸೂಚನೆ ಹೊರಡಿಸಿದ 15 ದಿನದೊಳಗಾಗಿ ಮೇಲ್ಮನವಿಯನ್ನು ಮಾನ್ಯ ಕುಲಪತಿಗಳು, ತೋ.ವಿ.ವಿ., ಬಾಗಲಕೋಟೆ, ಇವರಿಗೆ ಸಲ್ಲಿಸತಕ್ಕದ್ದು. ನಿಗದಿಪಡಿಸಿದ ದಿನಾಂಕದ ನಂತರ ಸ್ವೀಕೃತಗೊಂಡ ಮೇಲ್ಮನವಿಗಳನ್ನು ಪರಿಗಣಿಸಲಾಗುವುದಿಲ್ಲ.

ಆದೇಶದ ಮೇರೆಗೆ,

ಕುಲಸಚಿವರು,
ತೋ.ವಿ.ವಿ., ಬಾಗಲಕೋಟೆ
ಕುಲಸಚಿವರು
ತೋ..ವಿ.ವಿ.ಬಾಗಲಕೋಟ

ಗೆ,

ವಿಶ್ವವಿದ್ಯಾಲಯದ ಎಲ್ಲ ಅಧಿಕಾರಿಗಳು.
ಡೀನ್‌ಗಳು, ತೋಟಗಾರಿಕೆ ಮಹಾವಿದ್ಯಾಲಯಗಳು, ತೋ.ವಿ.ವಿ., ಬಾಗಲಕೋಟೆ.
ಸಹ ಸಂಶೋಧನಾ ವಿಸ್ತರಣಾ ನಿರ್ದೇಶಕರು, ಎಮ್.ಎಚ್.ಆರ್.ಈ.ಸಿ., ತೋ.ವಿ.ವಿ., ಬಾಗಲಕೋಟೆ.
ಮುಖ್ಯಸ್ಥರು, ತೋಟಗಾರಿಕೆ ಸಂಶೋಧನಾ ಹಾಗೂ ವಿಸ್ತರಣಾ ಘಟಕಗಳು,. ತೋ.ವಿ.ವಿ., ಬಾಗಲಕೋಟೆ.
ಮುಖ್ಯಸ್ಥರು, ತೋಟಗಾರಿಕೆ ವಿಸ್ತರಣಾ ಶಿಕ್ಷಣ ಘಟಕ ಕೇಂದ್ರಗಳು, ತೋ.ವಿ.ವಿ., ಬಾಗಲಕೋಟೆ.
ಹಿರಿಯ ವಿಜ್ಞಾನಿ ಮತ್ತು ಮುಖ್ಯಸ್ಥರು, ಕೃಷಿ ವಿಜ್ಞಾನ ಕೇಂದ್ರ, ಕೋಲಾರ.

} ಇವರುಗಳಿಗೆ ಮಾಹಿತಿಗಾಗಿ ಹಾಗೂ ಸಂಬಂಧಪಟ್ಟ ನೌಕರರ ಗಮನಕ್ಕೆ ತರಲು ಕೋರಿದೆ.

ಪ್ರತಿ: ಮಾನ್ಯ ಕುಲಪತಿಗಳ ಆಪ್ತ ಕಾರ್ಯದರ್ಶಿಗಳು, ತೋ.ವಿ.ವಿ., ಬಾಗಲಕೋಟೆ.

**ಅನುಬಂಧ**

## ಮುಂಬಡ್ತಿ ಅರ್ಹತಾ ಪಟ್ಟಿ

**(ಈ ಕಛೇರಿ ಅಧಿಸೂಚನೆ ಸಂಖ್ಯೆ: ಕು/ತೋವಿವಿಬಾ/ನೇ.ವಿ./ಸೇ.ಸಿ.ಬಡ್ತಿ–2018/2019–20/1720 ದಿನಾಂಕ: 07.01.2020)**

**ಸಹಾಯಕ ಅಭಿಯಂತರರು (ಸಿವಿಲ್) ಹುದ್ದೆಯಿಂದ ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು (ಸಿವಿಲ್) ಹುದ್ದೆಗೆ ಮುಂಬಡ್ತಿ ಖಾಲಿ ಇರುವ ಬ್ಯಾಕ್‌ಲಾಗ್ ರೋಸ್ಟರ್ ಅಡಿಯಲ್ಲಿ ಈ ಕೆಳಕಂಡ ನೌಕರರನ್ನು ಮುಂಬಡ್ತಿಗೆ ಪರಿಗಣಿಸಲಾಗಿದೆ.**

| ಕ್ರ.ಸಂ | ಹೆಸರು ಮತ್ತು ವಿದ್ಯಾರ್ಹತೆ | ಕೆಲಸದ ಸ್ಥಳ | ಜನ್ಮ ದಿನಾಂಕ | ಸೇವೆಗೆ ಸೇರಿದ ದಿನಾಂಕ | ತೋ.ವಿವಿ.,ಗೆ ಸೇರಿದ ದಿನಾಂಕ | ಪ್ರಸಕ್ತ ಹುದ್ದೆಗೆ ಸೇರಿದ ದಿನಾಂಕ |
|---|---|---|---|---|---|---|
| 1 | **ಶ್ರೀ ವಿನಯ ರೋಣದ (ಪ.ಜಾ)** ಬಿ.ಇ, ಅಕೌಂಟ್ಸ್ ಹೈಯರ್, ಜನರಲ್ ಲಾ I & II, ಪಿ.ಡಬ್ಲ್ಯೂಡಿ ಹೈಯರ್ I & II | **ತೋವಿವಿ, ಬಾಗಲಕೋಟೆ** | 01.05.87 | - | 09.07.10 | 09.07.10 |

ಕುಲಸಚಿವರು,
ತೋ.ವಿ.ವಿ., ಬಾಗಲಕೋಟೆ

ಕುಲಸಚಿವರು.
ತೋ..ವಿ.ವಿ.ಬಾಗಲಕೋಟ